# ಸಮವಾಯ

ವಿಶ್ವವು ಈಗ ಆತಂಕದ ಸ್ಥಿತಿಯಲ್ಲಿದೆ. ಮತ, ನಂಬಿಕೆ ಬೇರೆ ಬೇರೆಯಾಗಿವೆ; ಅಭಿಪ್ರಾಯ–ಶ್ರದ್ಧೆ ಬಹುಬಗೆಯಾಗಿ ನೆಲೆ ನಿಂತಿವೆ. ವೈಚಾರಿಕ ಆಕೃತಿಗಳು ಸಾಕಷ್ಟಿವೆ. ಆದರೆ, ಇವುಗಳನ್ನು ಪರಸ್ಪರ ಕೂಡಿಸುವ ಬಗೆ ಯಾವುದು? ಇವುಗಳನ್ನು ನಾವು ಕೂಡಿಸದೇ ಹೋದರೆ, ತಮ್ಮದೇ ಶ್ರೇಷ್ಠವೆಂಬ ಭಾವನೆಯಲ್ಲಿ ಛಿದ್ರ–ವಿಚ್ಛಿದ್ರ ನೆಲೆಗಳಲ್ಲಿ ನಾವು ನಿಂತುಬಿಡುವ ಅಪಾಯಕ್ಕೆ ಸಿಕ್ಕಿಹಾಕಿಕೊಳ್ಳುತ್ತೇವೆ. ಇಂಥ ಸಂದಿಗ್ಧಸ್ಥಿತಿಯಲ್ಲಿ ದೇವನಾಮ ಪ್ರಿಯದರ್ಶಿ ರಾಜ ಅಶೋಕನು ತನ್ನೊಂದು ಶಾಸನದಲ್ಲಿ 'ಷಮವಾಯೇವ ಸಾಧು' ಎಂದು ಹೇಳಿದ್ದಾನೆ. ಇದೊಂದು ಮಹಾವಾಕ್ಯ. ಈ ವಾಕ್ಯವನ್ನು ಸಂಸ್ಕೃತಕ್ಕೆ ತಿರುಗಿಸಿದರೆ 'ಸಮವಾಯ ಏವ ಸಾಧು' ಎಂದಾಗುತ್ತದೆ. ಹಾಗೆಂದರೆ, 'ಹೊಂದಿಕೊಂಡು ಬದುಕುವುದು, ಅದೇ ಒಳ್ಳೆಯದು' ಎಂದು ಇದರ ಅರ್ಥ. ಅಶೋಕನ ಕಾಲಕ್ಕೆ ಹಲವಾರು ಮತಗಳಿದ್ದವು. ಅವುಗಳಲ್ಲಿ ಭಿನ್ನಾಭಿಪ್ರಾಯಗಳೂ ಇದ್ದುವು. ಅವುಗಳನ್ನು ಏಕತ್ರಗೊಳಿಸುವಾಗ 'ಷಮವಾಯೇವ ಸಾಧು' ಎಂದಿದ್ದಾನೆ. ಈ ಮಾತಿನ ಬಗೆಯನ್ನು ಇನ್ನೊಂದಿಷ್ಟು ತಿಳಿಯೋಣ. ದೇವನಾಂಪ್ರಿಯನಾದ ಅಶೋಕನು, ಎಲ್ಲಾ ಮತಗಳನ್ನೂ ಸನ್ಯಾಸಿಗಳನ್ನೂ ಗೃಹಸ್ಥರನ್ನೂ ಗೌರವಿಸುತ್ತಿದ್ದ. ಸ್ವಮತ ಪ್ರಶಂಸೆ, ಪರಮತ ನಿಂದೆ ಮಾಡಕೂಡದೆಂದು ವಿಧಿಸಿದ್ದ. ಇನ್ನೊಬ್ಬರ ಧರ್ಮವನ್ನು ಶ್ರವಣ ಮಾಡಬೇಕು; ಶುಶ್ರೂಷೆ ಮಾಡಬೇಕು. ಇದು ದೇವನಾಂಪ್ರಿಯನ ಇಚ್ಛೆಯಾಗಿತ್ತು.

ಅಶೋಕನು 'ಷಮವಾಯೇವ ಸಾಧು' ಎಂದು ಹೇಳಿದ ಮೇಲೆ ನಮ್ಮ ದೇಶದಲ್ಲಿ ಅನೇಕ ಅವಘಡಗಳು ನಡೆದರೂ ಮತ–ಮತಗಳ ನಡುವೆ ಹೊಂದಿಕೊಂಡು ಬದುಕುವ ಮಾರ್ಗ ತಪ್ಪಿಲ್ಲ. ಅದು ಹೇಗೋ ನಮ್ಮ ಸಂಸ್ಕೃತಿಯ ಭಾಗವಾಗಿಯೇ ಉಳಿದು ಬಂದಿದೆ. ವಿಜಯನಗರದ ಶ್ರೀವೀರಬುಕ್ಕರಾಯನ ಕಾಲದಲ್ಲಿ ಜೈನರಿಗೂ ವೈಷ್ಣವರಿಗೂ ಮನಸ್ತಾಪ ಬಂದಿತ್ತು. ಆಗ ದೊರೆ ಇಬ್ಬರು ಮುಖಂಡರನ್ನು ಕರೆಸಿ ಶ್ರೀವೈಷ್ಣವರ ಕೈಯಲ್ಲಿ ಜೈನರ ಕೈಹಿಡಿದು ಇಟ್ಟು 'ವೈಷ್ಣವ ದರ್ಶನಕ್ಕೂ ಜೈನದರ್ಶನಕ್ಕೂ ಭೇದವಿಲ್ಲ. ಜೈನದರ್ಶನಕ್ಕೆ ವೈಷ್ಣವರ ದೆಸೆಯಿಂದ ಹಾನಿಯಾದರೆ, ವೈಷ್ಣವರಿಗೂ ಹಾನಿಯಾಗುವುದು' ಎಂದು ಹೇಳಿ ಆ ಎರಡೂ ಮತಗಳವರು ಹೊಂದಿಕೊಂಡು ಬಾಳುವಂತೆ ಬುದ್ಧಿ ಹೇಳಿದ್ದು ಇತಿಹಾಸದಲ್ಲಿ ನಡೆದ ಒಂದು ಘಟನೆ. 'ಸಮವಾಯ'ವು ನಮ್ಮ ಕನ್ನಡನಾಡಿನ ಒಂದು ಹಿರಿಯ ಲಕ್ಷಣ. ಪಂಪ ಇದಕ್ಕೊಂದು ನಿದರ್ಶನ. ಅವನು ವ್ಯಾಸರ ಭಾರತವನ್ನು 'ವಿಕ್ರಮಾರ್ಜುನವಿಜಯ'ವನ್ನಾಗಿಯೂ ಜಿನಸೇನರ ಪೂರ್ವಪುರಾಣವನ್ನು 'ಆದಿಪುರಾಣ'ವನ್ನಾಗಿಯೂ ಕೂಡಿಸಿಕೊಟ್ಟ. ಜೈನ–ವೈದಿಕ ಇವೆರಡು 'ಸಮವಾಯ'ದಿಂದ ಬೆರೆತುಕೊಂಡವು. ಪಂಪನಲ್ಲಿ ವೈದಿಕಧರ್ಮದ ಹಿರಿಮೆ; ಜೈನಧರ್ಮದ ಗರಿಮೆ ಸಮ್ಮಿಳಿತವಾಗಿ ಸೊಗಸು ಪಡೆಯಿತು.

ಸಂಸ್ಕೃತದಲ್ಲಿ ಹಿರಿದಾದ ಮಾತೊಂದಿದೆ. ಅದು 'ಯದ್ಯದಾಚರತಿ ಶ್ರೇಷ್ಠಃ' ಎಂಬುದು. ಲೋಕದಲ್ಲಿ ಉತ್ತಮರು ಹೇಗೆ ನಡೆದರೆ, ಉಳಿದವರು ಅದರಂತೆ ನಡೆಯುತ್ತಾರೆ. ಇದಕ್ಕೆ ಕನ್ನಡನಾಡಿನ ಶಾಸನಗಳು ಸಾಕ್ಷಿ ನುಡಿಯುತ್ತವೆ. ವೈದಿಕಧರ್ಮದ ದೊರೆಗಳು ಜೈನಧರ್ಮಕ್ಕೂ ಜೈನರಾಜರುಗಳು ಹಿಂದೂ ದೇವತೆಗಳಿಗೂ ಶೈವಪ್ರಭುಗಳು ಶೈವೇತರ ಮತಗಳಿಗೂ ಮನ್ನಣೆಕೊಟ್ಟ ಉದಾಹರಣೆಗಳು ಚರಿತ್ರೆಯಲ್ಲಿ ಹೇರಳವಾಗಿ ದೊರಕುತ್ತವೆ. ರಾಷ್ಟ್ರಕೂಟ ಅಮೋಘವರ್ಷ ಜೈನಮತಾವಲಂಬಿ. ಆದರೂ ಆತ ಮಹಾಲಕ್ಷ್ಮಿಯ ಭಕ್ತನಾಗಿದ್ದ. ಅವನು ಜನರಿಗಿದ್ದ ಉಪದ್ರವ ಪರಿಹರಿಸಲು ತನ್ನ ಎಡಬೆರಳನ್ನು ಮಹಾಲಕ್ಷ್ಮಿಗೆ ಅರ್ಪಿಸಿದ ವಿವರ ಶಾಸನವೊಂದು ಪ್ರತ್ಯಕ್ಷೀಕರಿಸುತ್ತದೆ. ತುಮಕೂರು ಸಮೀಪದ ಕೈದಾಳ ಶಾಸನವು ಚತುಸ್ಸಮಯಗಳನ್ನು ಸಮಾನಗೌರವದಿಂದ ನಡೆಸಿಕೊಂಡದ್ದನ್ನು ತಿಳಿಸುತ್ತದೆ. 'ಶಿವಾಯ ಧಾತ್ರೇ ಸುಗತಾಯ ವಿಷ್ಣವೇ ಜನಾಯ ತಸ್ಮೈ ಸಕಳಾತ್ಮನೇ ನಮಃ' ಎಂದು ಈ ಶಾಸನ ಪ್ರಾರಂಭ ಆಗುತ್ತದೆ. ಜೈನ, ಬೌದ್ಧ, ಶೈವ, ವೈಷ್ಣವ ಇವುಗಳಿಗೆ ಸಾಮಂತನಾದ ಬಾಚಿದೇವನು ಸಮಾನವಾಗಿ ನಡೆದುಕೊಳ್ಳುತ್ತಿದ್ದ. ಬೇಲೂರಿನ 'ಯಂ ಶೈವಾ ಸಮುಪಾಸತೇ...' ಎಂದು ಪ್ರಾರಂಭವಾಗುವ ಶಾಸನಪದ್ಯವು 'ಶೈವರು ಶಿವನೆಂದು, ವೇದಾಂತಿಗಳು ಬ್ರಹ್ಮನೆಂದು, ಬೌದ್ಧರು ಬುದ್ಧನೆಂದು, ನೈಯಾಯಿಕರು ಕರ್ತನೆಂದು, ಜೈನರು ಅರ್ಹಂತನೆಂದು, ಮೀಮಾಂಸಕರು ಕರ್ಮವೆಂದು ಯಾರನ್ನು ಉಪಾಸನೆ ಮಾಡುತ್ತಾರೋ ಆ ಕೇಶವನು ನಮ್ಮ ಇಷ್ಟಾರ್ಥಗಳನ್ನು ಸರ್ವದಾ ಈಡೇರಿಸಿಕೊಡಲಿ' ಎಂದು ಹರಸುತ್ತದೆ. ಅಶೋಕನು ಆಶಿಸಿದ 'ಸಮವಾಯ' ತತ್ತ್ವವನ್ನು ಕನ್ನಡನಾಡು ತನ್ನ ಸಂಸ್ಕೃತಿಯಲ್ಲಿ ಗರ್ಭೀಕರಿಸಿಕೊಂಡು ಮೆರೆದಿದೆ.

ಸಮವಾಯವು ಮತತತ್ತ್ವದ ವಿಷಯದಲ್ಲೂ ದರ್ಶನತತ್ತ್ವದ ವಿಷಯದಲ್ಲೂ ಹಾಸುಹೊಕ್ಕಾಗಿರುವುದು ಕನ್ನಡದ ಮಟ್ಟಿಗಂತೂ ಸತ್ಯಸ್ಯಸತ್ಯ. ಕೆಳದಿಯ ಅರಸರು ಶೈವರು. ಆದರೆ, ಅವರು ಅದ್ವೈತ, ದ್ವೈತ, ಶ್ರೀವೈಷ್ಣವ, ಜೈನ, ಮುಸ್ಲಿಂ ಎಂಬ ಭೇದಭಾವವಿಲ್ಲದೆ ಎಲ್ಲ ಮತಗಳ ಬೆಳವಣಿಗೆಗೂ ಅನುಕೂಲ ಮಾಡಿಕೊಟ್ಟರು. ನಂಜನಗೂಡಿನ ಶ್ರೀಕಂಠೇಶ್ವರನಿಗೆ ಟಿಪ್ಪುಸುಲ್ತಾನ್ ಹರಕೆ ಹೊತ್ತುಕೊಂಡು ಲಿಂಗಪ್ರತಿಷ್ಠೆ ಮಾಡಿದ್ದು, ಈಗಲೂ ಜನ 'ಸುಲ್ತಾನಲಿಂಗ' ಎಂದು ಕರೆಯುತ್ತಾರೆ. ಮುಸ್ಲಿಂ ಫಕೀರರೂ ಹಿಂದೂ ಸ್ವಾಮಿಗಳೂ ಪರಸ್ಪರ ಸೌಹಾರ್ದ, ಮೈತ್ರಿಗಳಿಂದ ಇದ್ದರು. ಸಿರಹಟ್ಟಿಯ ಫಕೀರಸ್ವಾಮಿ ಹಾಗೂ ಸಾವಳಗಿಯ ಶಿವಲಿಂಗೇಶ್ವರ ಸ್ವಾಮಿಗಳ ಮಠದಲ್ಲಿರುವ ಧಾರ್ಮಿಕ ಚಿಹ್ನೆಗಳನ್ನು ನಾವು ಗಮನಿಸಬೇಕು. ಇನ್ನು ಶಿಶುವಿನಾಳದ ಸಂತ ಶರೀಫರು 'ಸಮವಾಯ'ದ ಪ್ರತೀಕವಾಗಿದ್ದಾರೆ. ನಮ್ಮ ನಾಡಿನ ತತ್ತ್ವಪದಕಾರರು 'ಸಮವಾಯ'ದ ಸಂದೇಶವನ್ನು ತಮ್ಮ ಬದುಕಿನುದ್ದಕ್ಕೂ ಆಚರಿಸಿ ತೋರಿಸಿದ್ದಾರೆ. ಚರಿತ್ರೆಯ ಮೂಲಕ ದತ್ತವಾಗಿರುವ 'ಸಮವಾಯ' ತತ್ತ್ವವು ಇದೀಗ ವಿಸ್ಮೃತಿಗೊಂಡಿದೆ. ಈಗ ನಮಗೆ ಬೇಕಾದದ್ದು 'ಕಚ್ಚಾಡುವವರನು ಕೂಡಿಸಿ ಒಲಿಸು' ಎಂಬ ಕವಿವಾಣಿಗೂ 'ಸಬ್ ಕೊ ಸನ್ಮತಿ ದೇ' ಎಂಬ ಮಹಾತ್ಮಾಜಿ ಅವರ ಪ್ರಾರ್ಥನೆಯ ಕಡೆಗೂ ನಾವು ದೃಷ್ಟಿ ಹರಿಸಬೇಕಾಗಿದೆ.

■ **ಪುರಂಜೀವಿ**

## ಮಾತೇ ಮುತ್ತು

- ಎಷ್ಟೇ ಕಲೆಗಳನ್ನು ಅಭ್ಯಸಿಸಿದರೂ ಜೀವನದ ಅನುಭವ ಪಡೆಯದೆ ಹೋದರೆ ತೊಂದರೆ ಪಡಬೇಕಾಗುವುದು.
  —ಮುನಿವೆಂಕಟಪ್ಪ
- ಯಾರ ಆಸೆ–ಆಕಾಂಕ್ಷೆಗಳನ್ನು ಯಾವ ಸಮಾಜದ ಕಟ್ಟು ಕಟ್ಟಳೆಗಳೂ ಬಂಧಿಸಲಾರವು.
  —ಮಹಾತ್ಮ ಗಾಂಧಿ
- ಪರಸ್ಪರ ಒಪ್ಪಿಗೆ ಪಡೆದಿರುವ ಒಂದು ಕಟ್ಟು ಕಥೆಯೆ ಇತಿಹಾಸ.
  —ನೆಪೋಲಿಯನ್
- ಆಸೆಯನ್ನು ಬಿಡುವುದರ ಮೂಲಕ ದುಃಖದಿಂದ ದೂರಾಗಬಹುದು.
  —ಮಹಾವೀರ
- ಜೀವನ ಅನುಭವಗಳ ದೊಡ್ಡ ಸಂತೆ.
  —ಶಿವರಾಮ ಕಾರಂತ
- ಒಂದು ದೇಶದ ಯೋಗ್ಯತೆಯನ್ನು ಅಲ್ಲಿಯ ಕಲೆಗಳ ಮಟ್ಟದಿಂದ ಅಳೆದು ನೋಡಬಹುದು.
  —ಜವಾಹರಲಾಲ್ ನೆಹರು
- ಬುದ್ಧಿಶಾಲಿಯಾದವನು ಗುಣವಂತನಾದವನಿಗೆ ತಾನಾಗಿ ದಾನವನ್ನು ಮಾಡಬೇಕು.
  —ಬ್ರಹ್ಮಶಿವ
- ಸ್ವಪ್ನಗಳು ಸುಪ್ತಚಿತ್ತದ ವಾಣಿ.
  —ಕುವೆಂಪು
- ಚಟುವಟಿಕೆ ಇಲ್ಲದ ಜೀವನ ಒಂದು ಅಪರಾಧ; ಕಲೆ ಇಲ್ಲದ ಚಟುವಟಿಕೆ ಮೃಗಭಾವನೆ.
  —ಜಾನ್ ರಸ್ಕಿನ್